# BASAVASHREE COLLEGE OF LAW, KOLAR

## II MOOT COURT

## FACT OF THE CASE :

The Petitioner Husband namely: ***MOHAN*** has married the Respondent ***MAMATHA*** on dated: 02.05.2015 at Kolar " Pooja Kalyana Mantapa'' according to their rites and rituals in their Community. After the marriage the Respondent wife lived and resided with him at Kolar in the Petitioner's House as husband and wife with Love and affection. The Petitioner was discharging all his marital obligations fully and sincerely. But some time later the Respondent wife has turned hostile attitude towards the petitioner about staunch determination to leave the company of the petitioner husband as the respondent wife intended to live separately and independently without any obligations of her husband petitioner. Hence she has deserted her husband and to join her parent's house at K.G.F for doing Job independently. Thereafter the Respondent wife has abruptly left the house of the petitioner from Kolar without the consent and against the wishes of the petitioner to her parent's house at K.G.F. Thereafter the Respondent wife never eared to return the house of the petitioner to discharge all her marital obligations to the petitioner Husband. When the petitioner was away for his official duties the respondent wife abruptly came in a car on 10.11.2011 to the house of the petitioner and took away all her belongings. Thereafter the petitioner wrote letters but she did not respond those letters. Thereafter the Petitioner has issued a Legal Notice through his Advocate. But in spite of the efforts and persuasion, the Respondent wife did not come back to the matrimonial house and to live with the petitioner husband and discharge her marital obligations. Thereafter petitioner has filed the petition in M.C.No. *1/2017* before the Family Court at Kolar for restitution of conjugal Rights. But in spite of the receipt of the notice to the Respondent wife the Respondent wife has not join the matrimonial house by getting all previous incidents.

## NOTE :

1. In case of Arguments on behalf Mohan students has to file the Restitution of conjugal Right Petition.
2. In case of Arguments on behalf Mamatha students has to file the Divorce Petition.
3. The Second Moot Court will be held on **21.04.2018 SATURDAY** at **10.00** a.m
4. The students should wear white shirt, black pant & black coat.
5. The Students should prepare one hand written memorials and bring *3* sets of Xerox.
6. For more information contact ***Mr. M.V. NAGARAJ*** **Contact: 9945616724**

# ಬಸವಶ್ರೀ ಕಾನೂನು ಮಹಾವಿದ್ಯಾಲಯ, ಕೋಲಾರ

**ಅಣಕು ನ್ಯಾಯಾಲಯದ ಸಂಖ್ಯೆ : 2**

ವಾದಿಯ ಗಂಡ **ಮೋಹನ್** ಪ್ರತಿವಾದಿ **ಮಮತರವರನ್ನು** ದಿನಾಂಕ:02.05.2015ರಂದು ಕೋಲಾರದ 'ಪೂಜಾ ಕಲ್ಯಾಣ ಮಂಟಪ"ದಲ್ಲಿ ಅವರ ಧರ್ಮದ ಸಂಪ್ರಧಾಯಗಳ ಅಡಿಯಲ್ಲಿ ವಿವಾಹವಾಗಿರುತ್ತಾರೆ, ನಂತರ ಪ್ರತಿವಾದಿ ಮಮತರವರು ವಾದಿಯ ಗಂಡನ ಮನೆಯಲ್ಲಿ ಗಂಡ–ಹೆಂಡತಿಯರಂತೆ ಮತ್ತು ಪ್ರೀತಿ, ವಿಶ್ವಾಸದಿಂದ ಜೀವನ ಮಾಡುತ್ತಿರುತ್ತಾರೆ. ವಾದಿ ತನ್ನ ವೈವಾಹಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿರ್ವಹಿಸುತ್ತಿರುತ್ತಾರೆ. ತದ ನಂತರ ಪ್ರತಿವಾದಿ ಹೆಂಡತಿ ತನ್ನ ಪತಿಯ ಇಚ್ಚೆಗೆ ವಿರುದ್ದವಾಗಿ ನಡೆಯುತ್ತಾ ಅವರ ವೈವಾಹಿಕ ಸಂಬಂಧವನ್ನು ಬಿಟ್ಟು ತಾನು ಬೇರೆಯಾಗಿ ಸ್ವತಂತ್ರ ಜೀವನ ನಡೆಸಲು ತನ್ನ ಗಂಡನಿಂದ ಯಾವುದೇ ಅಡ್ಡಿ ಆತಂಕಗಳಿರಬಾರದೆಂದು ನಿಶ್ಚಯಿಸಿಕೊಂಡಿರುತ್ತಾಳೆ. ಆದ್ದರಿಂದ ಆಕೆ ತನ್ನ ಗಂಡನನ್ನು ಬಿಟ್ಟು ಅವರ ತವರು ಮನೆ ಕೆ.ಜಿ.ಎಫ್.ಗೆ ಹೊರಟು, ಸ್ವತಂತ್ರವಾಗಿ ವೃತ್ತಿ ನಡೆಸಲು ನಿಶ್ಚಯಿಸುತ್ತಿರುತ್ತಾಳೆ. ತದನಂತರ ಪ್ರತಿವಾದಿಯು ವಾದಿಯ ಇಚ್ಚೆಯ ವಿರುದ್ದ ಅವನ ಸಮ್ಮತಿಯಿಲ್ಲದೆ ವಾದಿಯ ಮನೆಯನ್ನು ತೊರೆದು ತನ್ನ ತವರು ಮನೆಯಾದ ಕೆ.ಜಿ.ಎಫ್.ಗೆ ಸೇರುತ್ತಾಳೆ. ತದ ನಂತರ ಪ್ರತಿವಾದಿಯು ತನ್ನ ಗಂಡನ ಮನೆಯನ್ನು ಸೇರುವ ಅಥವಾ ತನ್ನ ವೈವಾಹಿಕ ಕರ್ತವ್ಯಗಳನ್ನು ಪೂರೈಸುವ ಬಗ್ಗೆ ಯಾವುದೇ ಯೋಚನೆಯನ್ನು ಮಾಡಿರುವುದಿಲ್ಲ. ಹೀಗಿರುವಲ್ಲಿ ದಿನಾಂಕ: 10.11.2011ರಲ್ಲಿ ಪ್ರತಿವಾದಿಯು ಇದ್ದಕ್ಕಿದ್ದಂತೆ ಒಂದು ಕಾರಿನಲ್ಲಿ ವಾದಿಯ ಮನೆಗೆ ಬಂದು ಆ ಸಮಯದಲ್ಲಿ ವಾದಿಯು ಕೆಲಸದ ನಿಮಿತ್ತ ಹೊರಗಡೆಯಿರುವಾಗ ಪ್ರತಿವಾದಿ ವಾದಿಯ ಮನೆಯಲ್ಲಿರುವ ತನಗೆ ಸೇರಿದ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಹೋಗಿರುತ್ತಾಳೆ. ತದ ನಂತರ ವಾದಿಯು ಪತ್ರಗಳ ಮೂಲಕ ಪ್ರತಿವಾದಿಯನ್ನು ಸಂಪರ್ಕಿಸಿದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ವಾದಿಯು ಪ್ರತಿವಾದಿಯವರಿಗೆ ವಕೀಲರ ಮೂಲಕ ನೋಟಿಸನ್ನೂ ಸಹ ನೀಡಿರುತ್ತಾರೆ, ಆದರೂ ಸಹ ಪ್ರತಿವಾದಿಯುವರು ವಾದಿಯವರ ಜೊತೆ ಸೇರಿ ವೈವಾಹಿಕ ಜೀವನ ನಡೆಸಿರುವುದಿಲ್ಲ. ಈ ಎಲ್ಲಾ ಕ್ರಮಗಳನ್ನು ವಾದಿಯು ತೆಗೆದುಕೊಂಡಿದ್ದರೂ ಸಹ ಪ್ರತಿವಾದಿಯವರು ವಾದಿಯವರ ಮನೆಗೆ ಹಿಂತಿರುಗಿ ವೈವಾಹಿಕ ಜೀವನ ನಡೆಸಿರುವುದಿಲ್ಲ. ಆದ್ದರಿಂದ ವಾದಿಯವರು ಎಂ.ಸಿ. ಸಂಖ್ಯೆ: 1/2017ರ ಪ್ರಕಾರ ಕೋಲಾರ ಕೌಟುಂಬಿಕ ನ್ಯಾಯಾಲಯದಲ್ಲಿ ಪ್ರತಿವಾದಿ ವಿರುದ್ದ ದಾಂಪತ್ಯ ಹಕ್ಕುಗಳ ಪುನ: ಸ್ವಾಧೀನಕ್ಕೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಗೆ ನ್ಯಾಯಾಲಯದ ಮೂಲಕ ನೋಟಿಸ್ ಜಾರಿಯಾದರೂ ಸಹ ಪ್ರತಿವಾದಿಯವರು ಹಿಂದಿನ ಘಟನೆಗಳನ್ನು ಮರೆತು ವಾದಿಯ ಮನೆಗೆ ಬಂದು ಜೀವನ ನಡೆಯಿಸಿರುವುದಿಲ್ಲ.

**ಸೂಚನೆ:–**

1) ಮೋಹನ್ ಪರ ವಾದವನ್ನು ಮಂಡಿಸುವ ವಿದ್ಯಾರ್ಥಿಗಳು ದಾಂಪತ್ಯ ಹಕ್ಕುಗಳ ಪುನ: ಪ್ರಾಪ್ತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
2) ಮಮತ ಪರ ವಾದವನ್ನು ಮಂಡಿಸುವ ವಿದ್ಯಾರ್ಥಿಗಳು ವಿವಾಹ ವಿಚ್ಚೇಧನಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
3) ದ್ವಿತೀಯ ಅಣಕು ನ್ಯಾಯಾಲಯದ ದಿನಾಂಕ: 21**–04–2018** ಶನಿವಾರ ಆಗಿರುತ್ತದೆ.
4) ವಿದ್ಯಾರ್ಥಿಗಳು ಸಮವಸ್ತ್ರವನ್ನು ಕಡ್ಡಾಯವಾಗಿ ಧರಿಸಿರತಕ್ಕದ್ದು.
5) ವಿದ್ಯಾರ್ಥಿಗಳು ತಮ್ಮ ವಾದವನ್ನು ಬರವಣಿಗೆಯಲ್ಲಿ ಮೂರು ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು.
6) ವಿದ್ಯಾರ್ಥಿಗಳು ಹೆಚ್ಚಿನ ವಿಷಯಗಳಿಗಾಗಿ ***ಶ್ರೀ ಎಂ.ವಿ. ನಾಗರಾಜ್*** ಮೊಬೈಲ್ ಸಂಖ್ಯೆ: 9945616724 ಸಂಪರ್ಕಿಸಬಹುದು.